## ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ., ಕನಕಪುರ ರವರ ನ್ಯಾಯಾಲಯದಲ್ಲಿ

# CC No.693/2015

| | |
|---|---|
| ಸಾಕ್ಷಿದಾರರ ಹೆಸರು | ಸಿದ್ದೇಗೌಡ |
| ತಂದೆಯ ಹೆಸರು | ಪುಟ್ಟೇಗೌಡ |
| ವಯಸ್ಸು | 60 ವರ್ಷ |
| ವೃತ್ತಿ | ವ್ಯವಸಾಯ |
| ವಿಳಾಸ | ಹೂಕುಂದ |
| ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ | 08.12.2025 |

**ಮುಖ್ಯ ವಿಚಾರಣೆ ಎ ಪಿ ಪಿ ರವರಿಂದಃ-**

ಆರೋಪಿಯನ್ನು ನೋಡಿರುತ್ತೇನೆ. ಆತನ ಪರಿಚಯ ಇರುತ್ತದೆ. ಈ ದಿನ ನ್ಯಾಯಾಲಯದಲ್ಲಿ ಹಾಜರಿರುತ್ತಾರೆ. ಚಾಸಾ-1, 2, 4 ರಿಂದ 8 ರವರ ಪರಿಚಯ ಇದೆ.

2016 ರಲ್ಲಿ ರಾತ್ರಿ 8 ಗಂಟೆ ಸಮಯದಲ್ಲಿ ನನ್ನ ತಾತನವರು ಈಗಾಗಲೇ ವಿಭಾಗ ಮಾಡಿಕೊಂಡ ನಮ್ಮ ಮನೆಯ ಮುಂದೆ ಇರುವ ಜಾಗದಲ್ಲಿ ಆರೋಪಿ ಮನೆ ಕಟ್ಟುತ್ತಿದ್ದರು. ಮುಂದುಗಡೆ ಜಾಗ ನಮ್ಮದು ಹಿಂದುಗಡೆ ಜಾಗ ಅವರದು ಆಗಿರುತ್ತದೆ. ಊರಿನ ಗ್ರಾಮಸ್ಥರ ಪಂಚಾಯತಿಯ ಮೇರೆಗೆ ಮುಂದಿನ ಜಾಗವನ್ನು ಆರೋಪಿಗೆ ನಾನು ಬಿಟ್ಟುಕೊಟ್ಟಿದ್ದು ಹಿಂದಿನ ಜಾಗವನ್ನು ನಾನು ಪಡೆದುಕೊಂಡಿರುತ್ತೇನೆ. ಈ ಸಂಬಂಧ ಅದಲು ಬದಲು ಕಾಗದ ಪತ್ರವನ್ನು ಮಾಡಿಕೊಟ್ಟಿರುತ್ತಾರೆ. ಆದರೆ ಅದರಂತೆ ಜಾಗ ಬಿಟ್ಟಿರುವುದಿಲ್ಲ. ಅದನ್ನು ಕೇಳಲು ಹೋದಾಗ ಆರೋಪಿ ನಮಗೆ ದೊಣ್ಣೆ, ಕುಡ್ಲು ನಿಂದ ಹೊಡೆದು ನನ್ನ ಹೆಂಡತಿಯಾದ ಚಾಸಾ-1 ರವರ ರವಿಕೆಯನ್ನು ಹಿಡಿದು ಎಳೆದಾಡಿ ಬಟ್ಟೆ ಹರಿದಿರುತ್ತಾರೆ. ಚಾಸಾ-2 ನನ್ನ

ತಂಗಿಯಾಗಿದ್ದು ಈಕೆಗೆ ಆರೋಪಿಯಾದ ಸಹೋದರಿಯಾದ ಸಣ್ಣಮ್ಮ ಈಕೆಯು ಕೈಯನ್ನು ತಿರುಚಿಗಾಯಪಡಿಸಿರುತ್ತಾರೆ. ಜಾಗ ಕೇಳಲು ಹೋದ ನಮಗೆ ಹೊಡೆದು ಬಡಿದು ನನ್ನ ಕಾಲಿಗೆ ದೊಣ್ಣೆಯಿಂದ ಹೊಡೆದಿರುತ್ತಾರೆ. ನಂತರ ಅಕ್ಕಪಕ್ಕದವರು ಬಂದು ಬಿಡಿಸಿರುತ್ತಾರೆ. ನಮ್ಮನ್ನು ಉಪಚರಿಸಿರುತ್ತಾರೆ. ಈ ಸಂಬಂಧ ಹೇಳಿಕೆ ಕೊಟ್ಟಿರುತ್ತೇನೆ.

**(ಈ ಹಂತದಲ್ಲಿ ಸಾಕ್ಷಿದಾರ ಭಾಗಶಃ ಪ್ರತಿಕೂಲ ಸಾಕ್ಷಿ ನುಡಿದ ಕಾರಣ ಸ.ಸ ಅ ರವರು ಸಾಕ್ಷಿಯನ್ನು ವಾಟೀ ಸವಾಲನ್ನು ಮಾಡಲು ಅನುಮತಿ ನೀಡಲು ಕೋರಿದ ಮೇರೆಗೆ ಅನುಮತಿ ನೀಡಲಾಯಿತು).**

**ವಾಟೀ ಸವಾಲುಃ ಸ. ಸ. ಅ. ರವರಿಂದ**

ಗಲಾಟೆಯು ದಿಃ16.08.2016 ರಲ್ಲಿ ಆಗಿರುತ್ತದೆಂದರೆ ಸರಿ. ಆ ಸಮಯದಲ್ಲಿ ಚಾಸಾ-1 ರವರಿಗೆ ಆರೋಪಿಯು ಮಚ್ಚು ಹಾಗೂ ದೊಣ್ಣೆಯನ್ನು ಹಿಡಿದುಕೊಂಡು ಬಂದು ಹೊಡೆದು ಗಾಯಪಡಿಸಿರುತ್ತಾರೆಂದರೆ ಸರಿ. ಆ ಸಮಯದಲ್ಲಿ ಆರೋಪಿಯು ಚಾಸಾ-1 ರವರ ಎಡಗೈ ಕಿರುಬೆರಳು, ಎಡಗೈ ತೋಳು ಹಾಗೂ ಕುತ್ತಿಗೆಯ ಹಿಂಭಾಗಕ್ಕೆ ಹೊಡೆದು ನೋವುಂಟು ಮಾಡಿರುತ್ತಾರೆಂದರೆ ಸರಿ. ನಾನು ಬಿಡಿಸಲು ಹೋದಾಗ ನನಗೂ ಸಹ ಆರೋಪಿ ಹೊಡೆದು ನೋವುಂಟು ಮಾಡಿರುತ್ತಾರೆಂದರೆ ಸರಿ. ಜಗಳ ಬಿಡಿಸಲು ಬಂದ ಚಾಸಾ-2 ರವರಿಗೂ ಸಹ ಆರೋಪಿ ಮಚ್ಚಿ ನ ಹಿಂಭಾಗದಿಂದ ಎಡ ಮುಂಗೈ ಗೆ ಹೊಡೆದು ರಕ್ತಗಾಯ ಪಡಿಸಿರುತ್ತಾರೆಂದರೆ ಸಾಕ್ಷಿಯು ಅದು ಆರೋಪಿ ಅಲ್ಲ ಸಣ್ಣಮ್ಮ ಮಾಡಿರುತ್ತಾರೆಂದು ನುಡಿಯುತ್ತಾರೆ. ಜಗಳ ಬಿಡಿಸಲು ಚಾಸಾ-4 ರಿಂದ 6 ರವರು ಬಂದಿದ್ದರು ಎಂದರೆ ಸರಿ. ಆರೋಪಿ ಜಗಳ ಬಿಡಿಸಿದ ನಂತರ ಚಾಸಾ-1, 2 ಹಾಗೂ ನನಗೆ ಜೀವ ಬೆದರಿಕೆ ಹಾಕಿ ಹೋಗಿರುತ್ತಾರೆಂದರೆ ಸರಿ.

ಸಾಕ್ಷಿಗೆ ಈಗ ನ್ಯಾಯಾಲಯದ ಮುಂದಿರುವ ಒಂದು ದೊಣ್ಣೆ ಹಾಗೂ ಮಚ್ಚನ್ನು ತೋರಿಸಿದ್ದು ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಮುಮ-1 ಮತ್ತು 2 ಎಂದು

ಗುರುತಿಸಲಾಗಿದ್ದು ಸದರಿ ಮುದ್ದೆಮಾಲುಗಳಿಂದ ಚಾಸಾ-1 ಮತ್ತು 2 ರವರಿಗೆ ಆರೋಪಿ ಹಲ್ಲೆ ಮಾಡಿರುತ್ತಾರೆಂದರೆ ಸರಿ. ನಾನು ಪೋಲೀಸರಿಗೆ ನನಗೆ ಒಳಗಾಯಗಳಾಗಿದ್ದು ನಾನು ಮನೆಯಲ್ಲೇ ಚಿಕಿತ್ಸೆ ಪಡೆದುಕೊಂಡಿದ್ದು ಆಸ್ಪತ್ರೆಗೆ ಹೋಗಿರುವುದಿಲ್ಲ ಎಂದು ಹೇಳಿರುತ್ತೇನೆಂದರೆ ಸರಿ.

**ಈ ಹಂತದಲ್ಲಿ ಸಾಕ್ಷಿಯು ಸಣ್ಣಮ್ಮ ಎನ್ನುವವರ ಮೇಲೆ ಆರೋಪಣೆ ಮಾಡಿದ್ದು ಮಾನ್ಯ ಸ ಸ ಅ ರವರು ಅದನ್ನು ಪರಿಶೀಲನೆ ಮಾಡಿ ಸೂಕ್ತ ಅರ್ಜಿಯನ್ನು ನೀಡಲು ಹಾಗೂ ಮುಂದುವರಿದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದು ನೀಡಲಾಯಿತು.**

**ಓ ಹೇ ಕೇ ಸರಿ ಇದೆ**

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ.,**

**ಕನಕಪುರ .**